ದಿನಾಂಕಃ-07-02-2022 ರಂದು ಪುನಃ ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.

ಸಾಕ್ಷಿಗೆ ಕನ್ನಡ ಭಾಷೆ ಬರುವುದಿಲ್ಲ. ಮರಾಠಿ ಭಾಷೆ ಬರುತ್ತದೆ. ಶ್ರೀ.ಡಿ.ಟಿ.ಬಿ ವಕೀಲರನ್ನು ಅನುವಾದಕರನ್ನಾಗಿ ನೇಮಿಸಲಾಯಿತು.

**ಪಾಟೀ ಸವಾಲುಃ-ಶ್ರೀ.ಎಮ್.ಜಿ.ಕೆ ವಕೀಲರಿಂದ ವಾದಿ ಪರವಾಗಿ**

- ನನ್ನ ಊರು ಪುಣೆ ಹತ್ತಿರ ಖೇಡಗಾಂವ ಇದೆ. ನಾನು ಪುಣೆಯಲ್ಲಿ ವ್ಯಾಪಾರ ಮಾಡಿಕೊಂಡು ಇದ್ದೇನೆ. ಪುಣೆಯಲ್ಲಿ ನಾನು ಸಂಸಾರ ಸಹಿತನಾಗಿ ವಾಸವಿದ್ದೇನೆ. ನಾನು ಜಮಖಂಡಿಗೆ ನಮ್ಮ ಚಿಕ್ಕಮ್ಮ ಶಾಂತಾಬಾಯಿ ಜೀವಂತ ಇದ್ದಾಗ ಹೋಗಿ - ಬರುವ ರೂಡಿ ಇತ್ತು. ನಾನು ಆಗಾಗ ಚಿಕ್ಕಮ್ಮನನ್ನು ನೋಡಲು ಹೊರತುಪಡಿಸಿ ಬೇರೆ ಯಾವುದೇ ವ್ಯವಹಾರಗಳು ಇರಲಿಲ್ಲ. ಶಾಂತಾಬಾಯಿ ಇವರ ಸಹೋದರ ರಮಣಬಾಯಿ ಇಂಸ್ಲಾಪೂರದಲ್ಲಿ ವಾಸ ಇರುತ್ತಾರೆ ಎಂದರೆ ಸರಿ. ಶಾಂತಾಬಾಯಿಯು ಸಹ ಮೂಲತಃ ಇಸ್ಲಾಂಪೂರದವಳು ಎಂದರೆ ಸರಿ. ಶಾಂತಾಬಾಯಿ ಇವರು ಇಸ್ಲಾಂಪೂರಕ್ಕೆ ಹೋದರೆ ಇವರು ರಮಣಬಾಯಿ ಹತ್ತಿರ ಇರುತ್ತಿದ್ದರು ಎಂದರೆ ಸಾಕ್ಷಿಯು ಸಹ ಬೇರೆ ಕಡೆ ಸಹಿ ಇರುತ್ತಿದ್ದರು ಎಂದು ಹೇಳುತ್ತಾರೆ. ರಮಣಬಾಯಿ ಇವರು ವೈದ್ಯರು ಎಂದರೆ ಸರಿ. ಶಾಂತಾಬಾಯಿ ರಮಣಬಾಯಿ ಇವರ ಮನೆಯಲ್ಲಿ ತೀರಿಕೊಂಡಿದ್ದಾರೆ ಎಂದರೆ ಸರಿ. ಯಾವತ್ತು ಶಾಂತಾಬಾಯಿಯವರು ರಮಣಬಾಯಿ ವೈದ್ಯರ ಬಳಿ ಚಿಕಿತ್ಸೆ ಪಡೆಯುತ್ತಿದ್ದರು ಎಂದರೆ ಸಾಕ್ಷಿಯು ಇಸ್ಲಾಂಪೂರದಲ್ಲಿ ಇರುವ ವೈದ್ಯರ ಬಳಿ ಚಿಕಿತ್ಸೆ ಪಡೆಯುತ್ತಿದ್ದರು ಎಂದು ಹೇಳುತ್ತಾರೆ. ಡಾ-ಉಮರಾಣಿ ಶಾಂತಾಬಾಯಿಯವರ ಕುಟುಂಬದ ವೈದ್ಯರು ಎಂದರೆ ಸರಿಯಲ್ಲ. ಯಾವತ್ತು ಯಾವ ಸಂದರ್ಭದಲ್ಲಿ ಡಾ-ಉಮರಾಣಿ ಬಳಿ ಹೋಗಿಲ್ಲ ಎಂದರೆ ಸಾಕ್ಷಿಯು ಚಿಕಿತ್ಸೆಗೆಂದು ಉಮರಾಣಿ ಬಳಿ ಹೋಗುತ್ತಿದ್ದರು ಎಂದು ಹೇಳುತ್ತಾರೆ. ಶಾಂತಾಬಾಯಿ ಡಾ-ಉಮಾರಾಣಿರವರ ಬಳಿ ಚಿಕಿತ್ಸೆಗೆ ಹೋಗುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಶಾಂತಾಬಾಯಿ ಖಾಯಂವಾಗಿ ಜಮಖಂಡಿಯಲ್ಲಿ ವಾಸಿಸುತ್ತಿದ್ದರು ಎಂದರೆ ಶಾಂತಾಬಾಯಿ ಅವರ ಗಂಡ ಇಲ್ಲಿಯೇ ವಾಸ ಇರುವ ಕಾರಣ ಇದ್ದರು ಎಂದು ಹೇಳುತ್ತಾರೆ. ಜಮಖಂಡಿಯಲ್ಲಿ ಪ್ರಸಿದ್ದವಾದ ವೈದ್ಯರು ಇರುವ ಕಾರಣ ಇಲ್ಲಿಯೇ ಚಿಕಿತ್ಸೆ ಪಡೆಯಬಹುದಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಡಾ-ರಮಣಬಾಯಿ ಇವರ ಮಗಳು ಇದ್ದು

ಆಕೆಯ ಹೆಸರು ಸ್ವರೂಪಾ ಎಂದರೆ ಸರಿ. ಸ್ವರೂಪಾ ಈಕೆಯನ್ನು ಅಮೋಘ ಮೆಹತಾ ಎನ್ನುವವರಿಗೆ ಕೊಟ್ಟು ಮದುವೆ ಮಾಡಿದೆ ಎಂದರೆ ಸರಿ. ಅವರು ಪೂನಾದಲ್ಲಿ ಇರುತ್ತಾರೆ ಎಂದರೆ ಸರಿ.

2. ನನಗೆ ಒಬ್ಬ ಸಹೋದರಿ ಇದ್ದು ಆಕೆಯ ಹೆಸರು ಸರಳಾ. ಸ್ವರೂಪಾಳನ್ನು ಕೊಟ್ಟ ಮನೆಗೆ ನನ್ನ ಸಹೋದರಿ ಸರಳಾರವರನ್ನು ಕೊಟ್ಟು ಲಗ್ನ ಮಾಡಿದೆ ಎಂದರೆ ಸರಿಯಲ್ಲ. ಅಮೋಘ ಮೆಹತಾ ಈತನಿಗೆ ಒಬ್ಬ ಸಹೋದರ ಇದ್ದು ಆತನ ಹೆಸರು ಅನುಪ ಮೆಹತಾ ಎಂದರೆ ಸರಿ. ಅನುಪ ಮೆಹತಾ ವಕೀಲಿ ವೃತ್ತಿಯನ್ನು ಮಾಡಿಕೊಂಡು ಇದ್ದಾನೆ ಎಂದರೆ ನನಗೆ ಗೊತ್ತಿಲ್ಲ. ನಾನು ಮತ್ತು ಅನುಪ್ ಮೆಹತಾ ಸ್ನೇಹಿತರು ಎಂದರೆ ಸರಿಯಲ್ಲ. ಶಾಂತಾಬಾಯಿ ಇವಳ ಸ್ವತ್ತನ್ನು ಹೇಗಾದರು ಮಾಡಿ ಕಬಳಿಸುವ ಉದ್ದೇಶದಿಂದ ಅನುಪ್ ಮೆಹತಾ ಇವರೊಂದಿಗೆ ಮಿಲಾಪಿಯಾಗಿ ನಿಪಿ-3 ನ್ನು ಖೊಟ್ಟಿಯಾಗಿ ಸೃಷ್ಠಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಪ್ರಮಾಣ ಪತ್ರ ಮತ್ತು ತಕರಾರಿನಲ್ಲಿ ಎಕ್ಸಿಕ್ಯೂಟರ್ ಮತ್ತು ಟ್ರಸ್ಟಿ ಎಂದು ಸಾಧನೆ ಮಾಡಿದ್ದೇನೆ ಎಂದರೆ ಸರಿ. ಶಾಂತಾಬಾಯಿಯ ಮರಣಾನಂತರ ನಾನು ಮೃತ್ಯುಪತ್ರದಲ್ಲಿ ನಾನು ಟ್ರಸ್ಟಿ ಎಂದು ಗೊತ್ತಾಗಿತ್ತು ಎಂದರೆ ಶಾಂತಾಬಾಯಿ ಸಹಿ ಮಾಡುವಾಗ ಬಂದಾಗಲೇ ನನಗೆ ಗೊತ್ತಾಗಿತ್ತು ಎಂದು ಹೇಳುತ್ತ್ರಾರೆ. ಶಾಂತಾಬಾಯಿಯವರ ಮರಣಾನಂತರ ಈ ವಿಷಯ ನನಗೆ ಗೊತಿತ್ತು ಎಂದರೆ ಸರಿ. 2012 ರಲ್ಲಿ ಶಾಂತಾಬಾಯಿಯವರು ಮೃತವಾಗಿದ್ದು ಈಗ 10 ವರ್ಷಗಳಾಯಿತು. ನಿಡಿ-3 ಮರಣಶಾಸನದಲ್ಲಿ ನಾನು ಎಕ್ಸಿಕ್ಯೂಟರ ಮತ್ತು ಟ್ರಸ್ಟಿ ಎನ್ನುವ ಬಗ್ಗೆ ಸಂಬಂಧಪಟ್ಟ ಸಕ್ಷಮ ಜಿಲ್ಲಾ ನ್ಯಾಯಾಲಯದಿಂದ ಪ್ರೊಬೆಟ ನಮೂದಿಸಿದೆ ಎಂದರೆ ಸಾಕ್ಷಿ ಆ ರೀತಿ ಯಾವುದು ನಮೂದಿಸಿಲ್ಲ ಎಂದು ಹೇಳುತ್ತಾರೆ. ನಿಡಿ-3 ರಲ್ಲಿ ಈ ರೀತಿ ಪ್ರೊಬೆಟ ಪಡೆಯುವ ಬಗ್ಗೆ ನಮೂದು ಇದ್ದು ಸಕ್ಷಮ ಜಿಲ್ಲಾ ನ್ಯಾಯಾಲಯದಿಂದ ಪ್ರೊಬೆಟ ಉದ್ದೇಶ ಪೂರ್ವಕವಾಗಿ ಪಡೆದಿರಲಿಲ್ಲ ಎಂದರೆ ಸಾಕ್ಷಿಯು ನನಗೆ ಅದರ ಬಗ್ಗೆ ಮಾಹಿತಿ ಇರಲಿಲ್ಲ ಎಂದು ಹೇಳುತ್ತಾರೆ. ನನಗೆ ಆಂಗ್ಲ ಭಾಷೆ ಬರುವುದಿಲ್ಲ ಆದರು ಮರಣಶಾಸನವನ್ನು ಓದಿ ತಕ್ಕಮಟ್ಟಿಗೆ ಅರ್ಥಮಾಡಿಕೊಂಡಿದ್ದೇನೆ.

3. ಶಾಂತಾಬಾಯಿಯವರು ಇಂಸ್ಲಾಪೂರದಲ್ಲಿ ಪ್ರಾಥಮಿಕ ಹಂತದಲ್ಲಿ ಮರಾಠಿ ಮಾತೃ ಭಾಷೆಯಲ್ಲಿ ಶಿಕ್ಷಣವನ್ನು 1 ರಿಂದ 5 ನೇ ತರಗತಿವರೆಗೆ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಆಕೆಗೆ ಆಂಗ್ಲ ಭಾಷೆ ಬರುತ್ತಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಾನು ಮರಣಶಾಸನದಲ್ಲಿ ಸಾಕ್ಷಿಯಾಗಿ ಸಹಿ ಮಾಡಿದ್ದೇನೆ. ನಾನು ಸದರಿ ಮರಣಶಾಸನದ ಪ್ರಕಾರ ಸಾಕ್ಷಿದಾರನಾಗಿದ್ದು ಎಕ್ಸಿಕ್ಯೂಟರ ಆಗಿದ್ದು, ಟ್ರಸ್ಟಿ ಕೂಡಾ ಆಗಿದ್ದೇನೆ ಎಂದರೆ ಸರಿ. ಸದರಿ ಮರಣಶಾಸನದಲ್ಲಿ ನನಗೆ ಒಂದು ಲಕ್ಷ ರೂಗಳ ನಗದು ಕೊಡಬೇಕು ಎಂದು ನಮೂದು ಇದೆ ಎಂದರೆ ಸರಿ. ಸುಜೀತ ಶ್ರೀಕಾಂತ ಶಹಾ ಯಾರು ಅಂತಾ ನನಗೆ ವೈಯಕ್ತಿವಾಗಿ ಪರಿಚಯ ಇಲ್ಲ. ನನಗಿರುವ ಮಾಹಿತಿ ಪ್ರಕಾರ ಅವರು ಶಾಂತಾಬಾಯಿಯವರ ಸಂಬಂಧಿ ಅಂತಾ ನನಗೆ ಗೊತ್ತು. ಸುಜೀತ ಶ್ರೀಕಾಂತ ಶಹಾ ಏನು ಕೆಲಸ ಮಾಡಿಕೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಶಾಂತಾಬಾಯಿ ಮೃತರಾಗುವ 2 ವರ್ಷ ಪೂರ್ವದಲ್ಲಿ ಆಕೆಯ ಗಂಡ ಕಾಂತಿಲಾಲ ಮೃತವಾಗಿದ್ದ ಎಂದರೆ ಸರಿ. ಶಾಂತಾಬಾಯಿಯವರ ಒಬ್ಬ ಮಗನಿದ್ದು ಆತನ ಹೆಸರು ಮುರುಗೇಶ. ಸದರಿ ಮುರುಗೇಶ ಶಾಂತಾಬಾಯಿ ಇವರು ತೀರಿಕೊಂಡ 4 ವರ್ಷ ಪೂರ್ವದಲ್ಲಿ ಮೃತರಾಗಿದ್ದಾರೆ. ಶಾಂತಾಬಾಯಿ ಇವರ ಗಂಡ ಮತ್ತು ಮಗ ಇಬ್ಬರು ಮೃತರಾದ ಕಾರಣ ದುಃಖದಲ್ಲಿ ಇದ್ದರು ಎಂದರೆ ಸ್ವಲ್ಪ ಸ್ವಲ್ಪ ಇದ್ದರು ಎಂದು ಹೇಳುತ್ತಾರೆ. ಆದುದರಿಂದ ತಾನು ಮಾಡುವ ವೃತ್ತಿಗಳು ಮತ್ತು ತೆಗೆದುಕೊಳ್ಳವ ನಿರ್ಧಾರದ ಮೇಲೆ ಹತೋಟಿ ಇರಲಿಲ್ಲ ಎಂದರೆ ಸರಿಯಲ್ಲ.

ಶ್ರೀ.ಎಮ್.ಜಿ.ಕೆ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯವಕಾಶ ಕೋರಿದು ಸಮಯ ನೀಡಿ ಮುಂದೂಡಲಾಯಿತು.

ಸಾಕ್ಷಿಗೆ ಅನುವಾದಕರಾದ ಶ್ರೀ.ಡಿ.ಟಿ.ಬಿ ವಕೀಲರು ಬರೆದಿರುವ ಹೇಳಿಕೆಯನ್ನು ಮರಾಠಿಯಲ್ಲಿ ಸಾಕ್ಷಿಗೆ ಓದಿ, ಹೇಳಿ ಕೇಳಿ ಸರಿ ಇರುತ್ತದೆ ಎಂದು ಸಾಕ್ಷಿಯು ಸಹಿ ಮಾಡಿರುತ್ತಾರೆ.
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)
ಓ.ಹೇ.ಕೇ.ಸರಿ ಇದೆ ಅಂತಾ ಒಪ್ಪಿ ರುವರು.

ಸಹಿ/-

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಜಮಖಂಡಿ

ಸಾಕ್ಷಿಯ ಸಹಿ